**ಸಾಕ್ಷಿಯನ್ನು ದಿಃ 11.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆ ಹೂಡಿ ಸುಮಾರು 10 ವರ್ಷ ಆಗಿರುತ್ತದೆ. ನಾನು ಹಾಜರು ಪಡಿಸಿರುವ ದಾಖಲೆ ಎಷ್ಟು ವರ್ಷ ಹಳೆಯದ್ದು ಎಂದರೆ ಗೊತ್ತಿಲ್ಲ. ಸರ್ವೇ ನಂ. 80 ರಲ್ಲಿ 2 ಎಕರೆ 6 ಗುಂಟೆ ಜಮೀನು ನನ್ನ ತಾತ ಯಾಲಕ್ಕಯ್ಯ ರವರಿಗೆ ಸೇರಿದ್ದು. ನನ್ನ ತಂದೆಯ ಹೆಸರು ಯಾಲಕ್ಕಯ್ಯ. ಸರ್ವೇ ನಂ. 80 ಸಿಂಗ್ರಯ್ಯ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನಾನು ಯಾಲಕ್ಕಯ್ಯ ರವರ ಮಗಳು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ತಾಯಿಯ ಹೆಸರು ಸಿದ್ದಮ್ಮ ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ನಮ್ಮ ಊರಿನಲ್ಲಿ ಇನ್ನೊಬ್ಬ ಯಾಲಕ್ಕಯ್ಯ ಎನ್ನುವ ವ್ಯಕ್ತಿ ಇದ್ದ, ಸದರಿಯವರು ತೀರಿಹೋಗಿರುತ್ತಾರೆ. ಸದರಿಯವರು ಸಹ ಚಕ್ರಕೊಡಿಗೆ ಜಮೀನು ಮಾಡಿಕೊಂಡಿದ್ದರು. ನಾನು ಯಾಲಕ್ಕಯ್ಯ ರವರ ಮಗಳೇ ಅಲ್ಲ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿರುವ ದಾಖಲೆಗಳು ಬದನಾಳು ಎನ್ನುವವರು ತೆಗೆದುಕೊಟ್ಟಿರುತ್ತಾರೆ. 1992-93 ರ ನಂತರ ಈ ದಾವ ಹೂಡುವ ಒಳಗಿನ ಅವಧಿಯವರೆಗೆ ದಾವ ಜಮೀನಿನ ವಸ್ತು ಸ್ಥಿತಿ ಹೇಗಿತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಜಮೀನು ತೋರಿಸುತ್ತೇನೆ ಎಂದು ಉತ್ತರಿಸಿರುತ್ತಾರೆ. 1992-93 ರ ನಂತರದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದಾಖಲೆ ಹಾಜರು ಪಡಿಸಲು ತೊಂದರೆ ಇರಲಿಲ್ಲ. ಸರ್ವೇ ನಂ. 217 ರಲ್ಲಿ ಒಂದೂವರೆ ಗುಂಟೆ ಜವೀನು ಇದೆ ಎಂದು ವಾದ ಪತ್ರದಲ್ಲಿ ಬರೆಯಿಸಿರುತ್ತೇನೆ ಎಂದರೆ ಅದು ಸುಳ್ಳು. ಮುಂದುವರೆದು ಸಾಕ್ಷಿಯು ಒಂಬತ್ತು ಎಕರೆ ಇದೆ ಎಂದು ಬರೆಯಿಸಿರುತ್ತೇನೆ. ದಿಃ 25.01.2006 ರಂದು ಚಲುವಯ್ಯ ರವರು ಸರ್ವೇ ನಂ. 217 ರಲ್ಲಿರುವ 1 ಎಕರೆ 8 ಗುಂಟೆ ಜಮೀನನ್ನು ವಿನ್ಸೆಂಟ್ ಪಿಂಟೋ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚಲುವಯ್ಯ ಇರಲಿಲ್ಲ ಅವರ ಹೆಂಡತಿ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ವಿನ್ಸೆಂಟ್ ಪಿಂಟೋ ರವರಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಿ ಪರಿಹಾರ ಕೇಳಲು ತೊಂದರೆ ಇತ್ತಾ ಎಂದರೆ ನಾನು ಪರಿಹಾರ ಕೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸರ್ವೇ

ನಂ. 80 ರಲ್ಲಿ 2 ಎಕರೆ 7 ಗುಂಟೆ ಜಮೀನನ್ನು ದಿಃ 08.02.2010 ರಲ್ಲಿ ಸಿದ್ದಮ್ಮ, ಮಂಜುಳ, ಸುಮಿತ್ರ, ಮಂಜುನಾಥ ಮತ್ತು ಜಯಲಕ್ಷ್ಮೀ ಇವರೆಲ್ಲ ಸೇರಿ M/s ಭೂಮಿಕಾ ಹೌಸಿಂಗ್ ಕಾರ್ಪೊರೇಷನ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. M/s ಭೂಮಿಕಾ ಹೌಸಿಂಗ್ ಕಾರ್ಪೊರೇಷನ್ ರವರಿಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ಅತ್ತಿಗೆ ಬೈಯುತ್ತಿದ್ದರು ಹಾಗಾಗಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಎರಡು ಜಮೀನುಗಳು ಈಗ ಉಳಿದಿರುವುದಿಲ್ಲ ಎಂದರೆ ಸಾಕ್ಷಿಯು ಖರೀದಿಸಿದವರ ಬಳಿ ಇದೆ ಎಂದು ಉತ್ತರಿಸಿರುತ್ತಾರೆ. M/s ಭೂಮಿಕಾ ಹೌಸಿಂಗ್ ಕಾರ್ಪೊರೇಷನ್ ರವರು ಸದರಿ ಜಮೀನಿನಲ್ಲಿ ಸೈಟುಗಳನ್ನು ಮಾಡಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ಮನೆ ಕಟ್ಟಿರುವ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಜಮೀನು ವಸ್ತುಸ್ಥಿತಿ ನೋಡಿರುವುದಿಲ್ಲ.

ಸದರಿ ಎಲ್ಲಾ ವಿಷಯಗಳು ಗೊತ್ತಿದ್ದರೂ 7 ನೇ ಪ್ರತಿವಾದಿಯವರು ಉಳಿಸಿಕೊಂಡ ಜಮೀನನ್ನು ಸೇರಿಸಿ ಭಾಗ ಬರಬೇಕು ಎಂದು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೂರು ಜನ ಅಣ್ಣತಮ್ಮಂದಿರು ನನ್ನ ತಂದೆ ತೀರಿಹೋದ ನಂತರ ಆಸ್ತಿಗಳನ್ನು ವಿಭಾಗ ಮಾಡಿಕೂಂಡು ತಮಗೆ ಬಂದ ಭಾಗವನ್ನು ಅನುಭವಿಸಿಕೂಂಡಿದ್ದಾರೆ ಎಂದರೆ ಸರಿಯಲ್ಲ. ಕ್ರಯಪತ್ರಗಳಲ್ಲಿ 7 ನೇ ಪ್ರತಿವಾದಿ ಸ್ವಾಮಿ ರವರ ಸಹಿ ಇರುವುದಿಲ್ಲ ಎಂದರೆ ಸರಿ. 7 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಮತ್ತು ಅವರಿಂದ ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾಖಲೆಗಳ ಬಗ್ಗೆ ಓದಿ ಕೇಳಿ ತಿಳಿಸಿಕೊಂಡಿರುವುದಿಲ್ಲ. ನಾನು ಕೇಳಿರುವ ದಾವ ನಿವೃತ್ತಿಗೆ ಗೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.